ಶ್ರೀ ಎಸ್. ಬಂಗಾರಪ್ಪ.—ತಡೆಯಾಜ್ಞೆ ಯಾವುದಕ್ಕೆ ಇದೆ ?

ಶ್ರೀ ಎಂ. ಪಿ. ಪ್ರಕಾಶ್.—ಯಾವುದೇ ಟೂರಿಸ್ಟ್ ಬಸ್ಸುಗಳನ್ನು ತಡೆಹಿಡಿಯಲು ಬಾರದೆಂದು ಕೊಟ್ಟಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ತುಮಕೂರು ಜಿಲ್ಲೆಯಲ್ಲಿ ಎಷ್ಟು ಖಾಸಗೀ ಬಸ್ಸುಗಳಿಗೆ ಪರ್ಮಿಟ್ ಕೊಟ್ಟಿದ್ದೀರಿ ? ಈ ರೀತಿ ಪರ್ಮಿಟ್ ತೆಗೆದುಕೊಂಡಂತಹ ಬಸ್ಸುಗಳ ಮಾಲೀಕರು ರಾಷ್ಟ್ರೀಕರಣ ಗೊಳಿಸಿರುವಂಥ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸಿ, ಸರ್ಕಾರಕ್ಕೆ ಬರತಕ್ಕಂಥ ಆದಾಯವನ್ನು ತಪ್ಪಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದನ್ನು ತಪ್ಪಿಸುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ? ಕರ್ನಾಟಕ ಸಾರಿಗೆ ಸಂಸ್ಥೆಯವರು ಜನಗಳಿಗೆ ಸರಿಯಾದಂಥ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸದೇ ಇರುವುದರಿಂದ ಅನಿವಾರ್ಯವಾಗಿ ಖಾಸಗೀ ಬಸ್ಸುಗಳು ಓಡಲಿ ಎನ್ನುವ ಮನೋಭಾವನೆಯನ್ನು ಸಾರ್ವಜನಿಕರು ವ್ಯಕ್ತ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗೆ ಬಂದಿದ್ದಲ್ಲಿ, ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಸರಿಯಾದ ರೀತಿಯಲ್ಲಿ ಓಡಿಸಿ ಜನಗಳ ಮನಸ್ಸಿನಲ್ಲಿರತಕ್ಕ ಭಾವನೆಯನ್ನು ಹೋಗಲಾಡಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಉಪಾಧ್ಯಕ್ಷರೇ, ೧೮೫ ಬಸ್ಸುಗಳಿಗೆ ಪರವಾನಗಿ ಕೊಟ್ಟಿದ್ದೇವೆ. ಅನುಬಂಧದಲ್ಲಿ ಸಂಪೂರ್ಣವಾದ ವಿವರ ಇದೆ. ರಾಷ್ಟ್ರೀಕರಣಗೊಳಿಸಿದ ಮಾರ್ಗಗಳಲ್ಲಿ ಓಡಿಸುತ್ತಿರುವ ಬಸ್ಸುಗಳ ಬಗ್ಗೆ ನಿರ್ದಿಷ್ಟವಾಗಿ ತಿಳಿಸಿದರೆ ಹದ್ದುಬಸ್ತಿನಲ್ಲಿಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಅಂಥ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ. ನಾನು ನೀನೇ ತಾರೀಖು ಎಲ್ಲಾ ಪ್ರಾದೇಶಿಕ ಅಧಿಕಾರಿಗಳ ಸಭೆ ಕರೆದಿದ್ದೇನೆ. ಆ ಸಭೆಯಲ್ಲಿ ಸಂಪೂರ್ಣವಾಗಿ ಹೆಚ್ಚು ಪ್ರಾಮಾಣಿಕವೂ ದಕ್ಷವೂ ಆಗುವಂತ ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ರಾಷ್ಟ್ರೀಕರಣ ಸರ್ಕಾರದ ಉದ್ದೇಶ. ಕೆಲವು ಪ್ರದೇಶಗಳಲ್ಲಿ ಖಾಸಗಿಯವರು ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಇವರ ಮೇಲೆ ಮೊಕದ್ದಮೆ ಹೂಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ರಾಷ್ಟ್ರೀಕರಣವನ್ನು ಸರ್ಕಾರ ಹಂತ ಹಂತವಾಗಿ ಮಾಡುತ್ತದೆ. ಹಿಂದಿನ ಸರ್ಕಾರದವರು ಆಕ್ಷೇಪಣೆಗಳನ್ನು ವಿಚಾರಣೆ ಮಾಡದೇ ಕೈಬಿಟ್ಟಿರುವುದರಿಂದ ಎರಡು ತಿಂಗಳಲ್ಲಿ ಮಾಡುವುದಕ್ಕೆ ಆಗಲಿಲ್ಲ. ಮುಖ್ಯ ಮಂತ್ರಿಗಳೇ ಆಕ್ಷೇಪಣೆಗಳನ್ನು ವಿಚಾರಣೆ ಮಾಡಬೇಕಾಗುತ್ತದೆ. ಇದರ ಬಗ್ಗೆ ತಿದ್ದುಪಡಿ ಮಾಡುವುದಕ್ಕೂ ಮುಖ್ಯ ಮಂತ್ರಿಗಳು ಸೂಚನೆ ಕೊಟ್ಟಿದ್ದಾರೆ. ಇದು ಅಂಗೀಕಾರವಾಗಿ ನನಗೆ ಅಧಿಕಾರ ಬಂದರೆ, ಎಲ್ಲೆಲ್ಲಿ ಸಾಧ್ಯವೋ ಅಂಥ ಕಡೆಗಳಲ್ಲಿ ರಾಷ್ಟ್ರೀಕರಣ ಮಾಡುತ್ತೇನೆ.

ದೂರದರ್ಶನ ಕೇಂದ್ರ ಸ್ಥಾಪಿಸಲು ನಿವೇಶನ ಕೊಡುವ ಬಗ್ಗೆ

೨೩೬. ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ).—ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ .—

ಅ) ದೂರದರ್ಶನ ಕೇಂದ್ರಕ್ಕೆ ಬೇಕಾದ ನಿವೇಶನವನ್ನು ಕೊಡಲು ರಾಜ್ಯ ಸರಕಾರ ಒಪ್ಪಿದೆಯೇ ?

ಆ) ದೂರದರ್ಶನ ಕೇಂದ್ರದ ಸ್ಥಾಪನೆಗೆ ನಿರ್ಧಾರ ತೆಗೆದುಕೊಂಡ ಜೊತೆಯಲ್ಲಿ ತಿರುವನಂತಪುರ ಮುಂತಾದ ಇತರ ಕೇಂದ್ರಗಳಲ್ಲೂ ದೂರದರ್ಶನ ಕೇಂದ್ರ ಸ್ಥಾಪಿಸಲು ನಿರ್ಧಾರ ತೆಗೆದುಕೊಂಡಿದ್ದು ಆ ಕೇಂದ್ರಗಳ ನಿರ್ಮಾಣ ಕಾರ್ಯವು ಮುಕ್ತಾಯ ಘಟ್ಟಕ್ಕೆ ಬಂದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಇ) ನಿರ್ಮಾಣ ಕಾರ್ಯವು ಮುಗಿಯಲು ಹಾಗೂ ಕೇಂದ್ರವು ಪ್ರಾರಂಭವಾಗಲು ನಿಶ್ಚಿತ ಕಾಲಪಟ್ಟಿ ನಿಗದಿಯಾಗಿದೆಯೇ ?

ಶ್ರೀ ರಘುಪತಿ (ವಾರ್ತಾ ಮಂತ್ರು ಪ್ರವಾಸೊದ್ಯಮ ಮಂತ್ರಿಗಳು) .—

ಅ) ಹೌದು

ಆ) ತಿರುವನಂತಪುರದಲ್ಲಿ ನಿರ್ಮಾಣ ಕಾರ್ಯವು ಸಾಗುತ್ತಿದೆ. ಆದರೆ ತಮಿಳುನಾಡಿನ ಕೊಡೈಕೆನಾಲಿನಲ್ಲಿ ಕೆಲಸ ಇನ್ನೂ ಪ್ರಾರಂಭವಾಗಿಲ್ಲ ಎಂದು ತಿಳಿದು ಬಂದಿದೆ.

ಇ) ಈ ಯೋಜನೆಯನ್ನು ಕೇಂದ್ರ ಸರಕಾರದ ವಾರ್ತಾ ಮತ್ತು ಪ್ರಸಾರ ಇಲಾಖೆ ಕಾರ್ಯಗತ ಗೊಳಿಸುತ್ತಿದೆ ಬೆಂಗಳೂರಿನ ದೂರದರ್ಶನ ಕೇಂದ್ರದ ನಿರ್ಮಾಣ ಕಾರ್ಯವನ್ನು ಆದಷ್ಟು ಬೇಗ ಪ್ರಾರಂಭಿಸಿ ಮುಗಿಸಲು ಕೇಂದ್ರವನ್ನು ಕೇಳಿಕೊಳ್ಳಲಾಗುವುದು.

T. V. Relay Station at Bellary City

244. **Sri H. Naganagoud** (Kurugodu)—Will the Minister for Publicity and Information and Tourism be pleased to state :—

(a) the cost of one T.V. relay station

(b) whether there is any proposal to establish a T.V. relay station at Bellary City

(c) if not, will the Government take steps to establish the same ?*

Procuring a Van from the Government of India to relay Kannada Programmes in the Television

245. **Sri P. Ramdev** (Malleswaram)—Will the Minister for Publicity, Information and Tourism be pleased to state :—

(a) Whether the Government have proposed to procure a van which relays the programme in the television, from the centre, enabling to disply the Kannada programmes

(b) if so, the action taken by the Goverment in this regard ?*

ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ.—ನಿವೇಶನ ಕೊಡಲು ಒಪ್ಪಿಬೆ ಅಂದರೆ ಸ್ವಾಧೀನಕ್ಕೆ ಕೊಟ್ಟಿದೆಯೇ ? ಇದು ನಿರ್ಮಾಣ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ರಾಜ್ಯ ಸರ್ಕಾರದಿಂದ ಎಲ್ಲಾ ಕಾರ್ಯ ನಿರ್ವಹಣೆ ಆಗಬೇಕೆಂಬ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆಯೇ ? ಆದಷ್ಟು ಚಾಗ್ರತೆ ನಿರ್ಮಾಣ ಮಾಡಲಿಕ್ಕೆ ಸಾಧ್ಯವೇ ?

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ೧೯೮೧ರ ನವೆಂಬರ್ ತಿಂಗಳಲ್ಲಿ ಅವರೇ ಸ್ಥಳವನ್ನು ನಿಗಧಿಪಾಡಿದ್ದು. ಮೊನ್ನೆ ತಾನೆ ಹೋದ ತಿಂಗಳು ಪರವಾನಿಗೆ ಕೊಟ್ಟಿದ್ದು. ಕಟ್ಟಡ ಪ್ರಾರಂಭ ಮಾಡಬೇಕೆಂಬ ದಿಸೆಯಲ್ಲಿ ಎಲ್ಲಾ ವಿಧವಾದ ಒತ್ತಡ ತರುತ್ತಿದ್ದೇವೆ. ಬೇಗ ಕಟ್ಟಡ ಬೇಕೆಂದರೆ, ಪಿಡಬ್ಲ್ಯುಡಿಯವರು ಕಟ್ಟಿಸಿಕೊಡಬೇಕೆಂದರೆ ಇನ್ನು ಒಂದು ತಿಂಗಳಲ್ಲಿ ಟೆಂಡರ್ ಕರೆದು ಪ್ರಯತ್ನ ಮಾಡುತ್ತೇವೆ. ದೂರದರ್ಶನಕ್ಕೆ ಸಂಬಂಧಪಟ್ಟ ಹಾಗೆ ಕೇಂದ್ರದವರದೇ ಒಂದು ವಿಭಾಗ ಇದೆ. ಆ ಇಲಾಖೆಯವರೇ ಕಟ್ಟಬೇಕೆಂದು ಆದೇಶ ನೀಡಿರುವುದರಿಂದ ನಮ್ಮ ಕೈ ಕಟ್ಟಿದೆ.

Reply not received.